**ದಿನಾಂಕಃ 06.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ತೀರ್ಪುಋಣಿದಾರರ ಪರ ವಕೀಲರಿಂದಃ**

ಬಾಡಿಗೆ ಕರಾರಿನ ಪ್ರಕಾರ ಮಾಸಿಕ ಬಾಡಿಗೆ 15 ಸಾವಿರ ರೂ. ಹಾಗೂ ಮುಂಗಡ ಹಣ 2 ಲಕ್ಷ ರೂ.ಗಳು ಎಂದರೆ ಸರಿ. ಸದರಿ ಮುಂಗಡ ಹಣ ನನ್ನ ಬಳಿ ಇತ್ತು ಎಂದರೆ ಸರಿ. ಸದರಿ ಮುಂಗಡ ಹಣ ನನ್ನ ಬಳಿ ಇದೆ ಎಂದರೆ ಸರಿ. ಮೂಲ ದಾವೆ ಸಂ.6052/2021 ರ ದಾವೆ ದಿನಾಂಕ 15.07.2022 ರಂದು ಡಿಕ್ರಿ ಆಯಿತು ಎಂದರೆ ಸರಿ. ಅದಾದ ಒಂದು ತಿಂಗಳಲ್ಲಿ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ದಿನಾಂಕ 27.09.2022 ರಲ್ಲಿ ತೀರ್ಪುಋಣಿದಾರರು ಸ್ವತ್ತನ್ನು ಖಾಲಿ ಮಾಡಿರುತ್ತಾರೆ ಎಂದರೆ ಸರಿ. ತದನಂತರ ತೀರ್ಪುಋಣಿದಾರರು ನನಗೆ 25 ಸಾವಿರ ರೂ.ಹಣವನ್ನು ಪಾವತಿಸಿರುತ್ತಾರೆ ಎಂದರೆ ಸರಿ. ನಾನು ಈ ಅರ್ಜಿ ಸಲ್ಲಿಸುವಾಗ ತೀರ್ಪುಋಣಿದಾರರಿಂದ ರೂ.1,85,872/- ಬಾಕಿ ಇತ್ತು ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನೇ ತೀರ್ಪುಋಣಿದಾರರಿಗೆ 40 ಸಾವಿರ ರೂ. ಹಣ ಪಾವತಿಸಲು ಬಾಧ್ಯನು ಎಂದರೆ ಸಾಕ್ಷಿ ನುಡಿಯುತ್ತಾರೆ ತೀರ್ಪುಋಣಿದಾರರು ನನಗೆ ಜನವರಿ 2021 ರಿಂದ 27.09.2022 ರವರೆಗೆ ಬಾಡಿಗೆ ಹಣವನ್ನು ನೀಡಿರುವುದಿಲ್ಲ. ನಾನು ತೀರ್ಪುಋಣಿದಾರರಿಂದ ಬಾಡಿಗೆ ಹಣವನ್ನು ಪಡೆದುಕೊಳ್ಳುವಾಗ ಅವರಿಗೆ ಯಾವುದೇ ರಶೀದಿಯನ್ನು ನೀಡುತ್ತಿರಲಿಲ್ಲ. ನಾನು ತೀರ್ಪುಋಣಿದಾರರಿಂದ ಬಾಡಿಗೆ ಹಣವನ್ನು ನಗದು ರೂಪದಲ್ಲಿ ಪಡೆದಿದ್ದೆನು. ಮೂಲ ದಾವೆ ಸಂ.6052/2021 ರ ದಾವೆ ಡಿಕ್ರಿ

ಆಗುವವರೆಗೆ ತೀರ್ಪುಋಣಿದಾರರು ನನಗೆ ಪೂರ್ತಿ ಬಾಡಿಗೆ ಹಣವನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.